**ಸಿಸಿ ನಂಃ 1930/2025**

**ಪಿ. ಡಬ್ಲ್ಯು 1**

**(ಇಂದು ದಿನಾಂಕಃ 09-04-2026 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**<u>ಪಾಟೀ ಸವಾಲುಃ-ಆರೋಪಿ ಪರ ವಕೀಲರಾದ ಶ್ರೀ ವಿ ಜಿ ಎ ರವರಿಂದಃ</u>**

ನಿಮಗೆ ಆರೋಪಿಯ ಪರಿಚಯ ಎಷ್ಟು ವರ್ಷಗಳಿಂದ ಇದೆ ಎಂದರೆ ಸಾಕ್ಷಿ ಕಳೆದ 7-8 ವರ್ಷಗಳಿಂದ ಇದೆ ಅಂತಾ ಉತ್ತರಿಸುತ್ತಾರೆ. ಆರೋಪಿ ನಮ್ಮ ಸಂಘದ ಗುಂಪಿನಲ್ಲಿ ಇದ್ದರು. ಆ ಸಂಘದ ಹೆಸರು ಏನು ಎಂದರೆ ಸಾಕ್ಷಿ BSS ಸಂಘ ಅಂತಾ ಉತ್ತರಿಸುತ್ತಾರೆ. ಆ ಸಂಘದಲ್ಲಿ ನೀವು ಹಾಗೂ ಆರೋಪಿಯನ್ನು ಹೊರತುಪಡಿಸಿ ಎಷ್ಟು ಮಂದಿ ಸದಸ್ಯರಿದ್ದಾರೆ ಎಂದರೆ ಸಾಕ್ಷಿ ಎಷ್ಟು ಮಂದಿ ಸದಸ್ಯರಿದ್ದಾರೆ ಎಂಬುದು ನನಗೆ ನೆನಪಿಲ್ಲ. ಈ ಪಿರ್ಯಾದಿಯಲ್ಲಿ ಉಲ್ಲೇಖಿಸಿರುವ ಹಣಕಾಸಿನ ವ್ಯವಹಾರ ಸದ್ರಿ ಸಂಘದಲ್ಲಿನ ವ್ಯವಹಾರವೇ ಎಂದರೆ ಸಾಕ್ಷಿ ಅಲ್ಲ ಅಂತಾ ಉತ್ತರಿಸುತ್ತಾರೆ.

2. ಆರೋಪಿಯ ಗಂಡ ನಮ್ಮ ಟೆಂಪೋ ಓಡಿಸುತ್ತಿದ್ದರು . ಫಿರ್ಯಾದಿಯಲ್ಲಿ ಉಲ್ಲೇಖಿಸಿರುವ ಹಣಕಾಸಿನ ವ್ಯವಹಾರ ಆ ಟೆಂಪೋಗೆ ಸಂಬಂಧಿಸಿದ ವ್ಯವಹಾರವೇ ಎಂದರೆ ಸಾಕ್ಷಿ ಅಲ್ಲಾ ಅಂತಾ ಉತ್ತರಿಸುತ್ತಾರೆ.

3. ನೀವು ಏನು ಉದ್ಯೋಗ ಮಾಡುತ್ತೀರಿ ಎಂದರೆ ಸಾಕ್ಷಿ ನನಗೆ ಯಾವುದೇ ಉದ್ಯೋಗ ಇರುವುದಿಲ್ಲ ನಾನು ಮನೆಯಲ್ಲಿಯೇ ಇರುತ್ತೇನೆ ಅಂತಾ ಉತ್ತರಿಸುತ್ತಾರೆ. ಆರೋಪಿಗೆ ರೂ.1,25,000/- ನೀಡಲು ಆರ್ಥಿಕ ಸಾಮರ್ಥ್ಯ ಇದೆ ಎಂಬುದರ ಕುರಿತು ಏನಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿಲ್ಲ ಅಂತಾ ಉತ್ತರಿಸುತ್ತಾರೆ. ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

4. ನಿಮ್ಮ ಗಂಡನಿಗೆ ಸೇರಿದ ಟೆಂಪೋದಿಂದಲೇ ನಿಮ್ಮ ಕುಟುಂಬದ ನಿರ್ವಹಣೆ ಆಗಬೇಕು ಎಂದರೆ ಸಾಕ್ಷಿ ಹೌದು ಆದರೆ ಆರೋಪಿಗೆ ಹಣ ಕೊಡುವ ಸಮಯದಲ್ಲಿ ನಮಗೆ ಅಂಗಡಿ ಇತ್ತು ಅಂತಾ ಉತ್ತರಿಸುತ್ತಾರೆ. ಅದು ಯಾವ ಅಂಗಡಿ ಎಂದರೆ ಸಾಕ್ಷಿ ಕಿರಾಣಿ ಅಂಗಡಿ ಅಂತಾ ಉತ್ತರಿಸುತ್ತಾರೆ. ಕಿರಾಣಿ ಅಂಗಡಿ ನಡೆಸಬೇಕಾದರೆ GST ನೊಂದಣಿ ಹೊಂದಿರಬೇಕಾಗಿದ್ದು GST ನೊಂದಣಿ ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ಕಿರಾಣಿ ಅಂಗಡಿ ಹೊಂದಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ನನಗೆ

ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ನನ್ನ ಗಂಡನಿಗೆ ಟೆಂಪೋ ವಾಹನ ಇತ್ತು ಅಂತಾ ತೋರಿಸಲು ದಾಖಲೆ ಹಾಜರುಪಡಿಸಬಹುದು ಎಂದರೆ ಸರಿ.

5. ಈ ಪ್ರಕರಣ ಹೊರತು ಪಡಿಸಿ ಇನ್ಯಾರ ವಿರುದ್ಧ ಚೆಕ್ ಅಮಾನ್ಯ ಪ್ರಕರಣಗಳನ್ನು ದಾಖಲಿಸಿದ್ದೀರಿ ಎಂದರೆ ಸಾಕ್ಷಿ ಕೃತಿಕಾ ರೂಪೇಶ್ ನಾಯ್ಕ ಎಂಬವರ ವಿರುದ್ಧ ದಾಖಲಿಸಿರುತ್ತೇನೆ ಅಂತಾ ಉತ್ತರಿಸುತ್ತಾರೆ. ನೀವು ಸಿದ್ದಿ ಸಂತೋಷ ನರ್ವೆಕರ್ ಎಂಬವರ ವಿರುದ್ಧ ಸಿ.ಸಿ ನಂಬ್ರ 876/2025 ರಂತೆ ಚೆಕ್ ಅಮಾನ್ಯ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸಾಕ್ಷಿ ಸದ್ರಿ ಪ್ರಕರಣ ಈಗಲೂ ನಡೆಯುತ್ತಿದೆ ಅಂತಾ ಉತ್ತರಿಸುತ್ತಾರೆ. ಇಷ್ಟೊಂದು ಜನರ ನಡುವೆ ವ್ಯವಹಾರ ಮಾಡಿರುವುದರಿಂದ ನಿಮಗೆ ವ್ಯವಹಾರ ಜ್ಞಾನ ಚೆನ್ನಾಗಿದೆ ಎಂದರೆ ಸರಿ. ಯಾರಿಗಾದರೂ ಹಣ ಕೊಟ್ಟರೆ ಭದ್ರತೆಗಾಗಿ ಕರಾರನ್ನು ಮಾಡಿಕೊಳ್ಳಬೇಕು ಎಂಬ ಬಗ್ಗೆ ನಿಮಗೆ ಜ್ಞಾನ ಇದೆ ಎಂದರೆ ಸಾಕ್ಷಿ ಗೊತ್ತಿಲ್ಲ ಅಂತಾ ಉತ್ತರಿಸುತ್ತಾರೆ. ಈ ಮೇಲೆ ಹೇಳಿದ ಜನರಿಗೆ ಹಣ ಕೊಡುವಾಗ ಅವರಿಂದ ಭದ್ರತೆಗಾಗಿ ಎಷ್ಟು ಚೆಕ್ಕುಗಳನ್ನು ತೆಗೆದುಕೊಳ್ಳುತ್ತೀರಿ ಎಂದರೆ ಸಾಕ್ಷಿ ದುಡ್ಡು ಕೊಡುವಾಗ ಚೆಕ್ಕನ್ನು ತೆಗೆದುಕೊಂಡಿಲ್ಲ , ದುಡ್ಡು ಕೇಳಿದ ಮೇಲೆ ಅವರು ಚೆಕ್ಕು ಕೊಟ್ಟಿರುತ್ತಾರೆ ಅಂತಾ ಉತ್ತರಿಸುತ್ತಾರೆ.

6. ಈ ಪ್ರಕರಣದ ಫಿರ್ಯಾದಿಯಲ್ಲಿ ದಿನಾಂಕ 06-05-2023 ರಂದು ರೂ.25,000/-, ದಿನಾಂಕ 10-08-2023 ರಂದು ರೂ.10,000/-ಕೊಟ್ಟಿದ್ದೇನೆ ಅಂತಾ ಹೇಳಿರುತ್ತೇನೆ ಎಂದರೆ ಸರಿ. ದಿನಾಂಕ 06-05-2023 ರಂದು ರೂ.25,000/-ಆರೋಪಿಗೆ ಕೊಟ್ಟಾಗ ಅವರು ಒಂದು ತಿಂಗಳಿನಲ್ಲಿ ವಾಪಾಸು ಕೊಡುತ್ತೇನೆ ಅಂತಾ ಹೇಳಿದ್ದರು. ದಿನಾಂಕ 10-08-2023 ರಂದು ರೂ.10,000/- ಕೂಡುವಾಗ ಹಿಂದೆ ಕೊಟ್ಟಿದ್ದ ರೂ.25,000/-ನ್ನು ಮರಳಿ ಕೊಟ್ಟಿಲ್ಲ ಅದನ್ನು ಕೊಡಬೇಕು ಅಂತಾ ಆರೋಪಿಯ ಬಳಿ ಕೇಳಿದ್ದೀರಾ ಎಂದರೆ ಸಾಕ್ಷಿ ಹೌದು ಕೇಳಿದ್ದೆ ಆದಕ್ಕೆ ಆರೋಪಿ ಎಲ್ಲವನ್ನು ಒಂದೇ ಬಾರಿ ವಾಪಾಸು ಕೊಡುತ್ತೇನೆ ಅಂತಾ ಹೇಳಿದ್ದರು ಅಂತಾ ಉತ್ತರಿಸುತ್ತಾರೆ. ನನ್ನ ಪ್ರಕಾರ ಆರೋಪಿಗೆ ಒಟ್ಟು 5 ಬಾರಿ ಹಣ ಕೊಟ್ಟಿರುತ್ತೇನೆ. ಪ್ರತಿ ಬಾರಿಯೂ ಈ ಹಿಂದೆ ಕೊಟ್ಟ ಹಣವನ್ನು ವಾಪಾಸು ಕೊಡುವಂತೆ ಆರೋಪಿಯ ಬಳಿ ಕೇಳಿದ್ದೆ. ಆ ಸಮಯದಲ್ಲಾದರೂ ಆರೋಪಿಯಿಂದ ಒಂದು ಕರಾರು ಪತ್ರವನ್ನು ಬರೆಯಿಸಿಕೊಳ್ಳಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ಆದರೆ ಕೊಡುತ್ತೇನೆ ಅಂತಾ ಹೇಳಿದ್ದರಿಂದ ವಿಶ್ವಾಸದಿಂದ ಕರಾರನ್ನು ಬರೆಯಿಸಿಕೊಂಡಿಲ್ಲ ಅಂತಾ ಉತ್ತರಿಸುತ್ತಾರೆ. ದಿನಾಂಕ

06-05-2023 ರಂದು ಪ್ರಥಮ ಬಾರಿಗೆ ರೂ. 25,000/-ಕೊಟ್ಟ ನಂತರ ಆರೋಪಿ ನಿಮಗೆ ಯಾವತ್ತಾದರೂ ಹಣವನ್ನು ಮರುಪಾವತಿ ಮಾಡಿದ್ದಾರಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ.

7. ನನಗೆ ಸಂತೋಷ ನಾಯ್ಕ ಎಂಬ ಸಹೋದರರಿದ್ದಾರಾ ಎಂದರೆ ಸಾಕ್ಷಿ ಅವರು ನನ್ನ ಅಣ್ಣ ಅಂತಾ ಉತ್ತರಿಸುತ್ತಾರೆ. ಸದ್ರಿ ಸಂತೋಷನಾಯ್ಕರವರು ನೀವು ಹೇಳುವ BSS ಸಂಘದಲ್ಲಿ ಇದ್ದಾರಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ನೀಡಿ ಮುಂದೂಡಲಾಗಿದೆ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಕಾರವಾರ.**